# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಶ್ರೀ ಮರಿತಿಬ್ಬೇಗೌಡ, ಶ್ರೀ ದಿನೇಶ್ ಗೂಳಿಗೌಡ ಹಾಗೂ ಶ್ರೀ ಮಧು ಜಿ. ಮಾದೇಗೌಡ ಇವರ ನಿಯಮ - 72 ರಡಿ ಗಮನ ಸೆಳೆಯುವ ಸೂಚನೆಗೆ ಲೋಕೋಪಯೋಗಿ ಇಲಾಖೆಯ ಮಾಹಿತಿ**

**ವಿಷಯ:** ಬೆಂಗಳೂರು ಹಾಗೂ ಮೈಸೂರಿನ ಗಾಲ್ಫ್ ಕ್ಲಬ್ ಹಾಗೂ ಟರ್ಫ್ ಕ್ಲಬ್ ಗಳು ಸರ್ಕಾರಿ ಜಮೀನನ್ನು ಅತ್ಯಂತ ಕಡಿಮೆ ದರಕ್ಕೆ ಗುತ್ತಿಗೆ ಪಡೆದಿದ್ದು, ಗುತ್ತಿಗೆ ಕರಾರಿನ ಪ್ರಕಾರ ಕ್ಲಬ್‌ನ್ನು ನಿರ್ವಹಣೆ ಮಾಡದೆ, ಅನಧಿಕೃತ ಕಟ್ಟಡ ನಿರ್ಮಾಣ ಮಾಡುತ್ತಿರುವುದಲ್ಲದೆ, ಗುತ್ತಿಗೆ ಅವಧಿಯು ಮುಗಿದಿದ್ದರೂ ಸಹ ಅನಧಿಕೃತವಾಗಿ ಕ್ಲಬ್‌ನ್ನು ನಡೆಸುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇವೆ.

*****

**ಉತ್ತರ:**

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:31.07.2012 ರಂದು ನಡೆದ ಸಭೆಯಲ್ಲಿ ಮೈಸೂರು ರೇಸ್ ಕ್ಲಬ್, ಬೆಂಗಳೂರು ಟರ್ಫ್ ಕ್ಲಬ್, ಬೆಂಗಳೂರು ಗಾಲ್ಫ್ ಕ್ಲಬ್‌ಗಳಿಗೆ ಲೀಸ್ ಆಧಾರದ ಮೇಲೆ ನೀಡಲಾಗುವ ಜಂಮೀನುಗಳ ಬಾಡಿಗೆಯನ್ನು ನಿಗಧಿಪಡಿಸುವ ಸಂಬಂಧ ಸಭೆ ನಡೆಸಿದ್ದು, ಸದರಿ ಸಭೆಯಲ್ಲಿ ಈ ಸಂಸ್ಥೆಗಳು ಬೆಟ್ಟಿಂಗ್ ಟ್ಯಾಕ್ಸ್, Entertainment tax ಮೂಲಕ ಪರೋಕ್ಷವಾಗಿ ಆರ್ಥಿಕ ಚಟುವಟಿಕೆಗಳಿಗೆ ಕೊಡುಗೆ ನೀಡುತ್ತಿರುವ ಬಗ್ಗೆ ಮತ್ತು ನೇರ ಹಾಗೂ ಪರೋಕ್ಷವಾಗಿ ಉದ್ಯೋಗ ನೀಡುತ್ತಿರುವ ಬಗ್ಗೆ ಚರ್ಚಿಸಿ, ಇದನ್ನು ಪರಿಗಣಿಸಿ ಬಾಡಿಗೆಯನ್ನು ಆಯಾ ಸಂಸ್ಥೆಗಳ ವಾರ್ಷಿಕ ವರಮಾನದ ಮೇಲೆ ಶೇ.2 ರಷ್ಟನ್ನು ಬಾಡಿಗೆಯನ್ನಾಗಿ ಪಡೆಯುವ ಬಗ್ಗೆ ಶಿಫಾರಸ್ಸು ಮಾಡಲು ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಇಲಾಖೆಯಲ್ಲಿ ಪ್ರಸ್ತುತ ಇದರನ್ವಯ ಬಾಡಿಗೆ ನಿಗಧಿಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಜಮೀನುಗಳ ಲೀಸ್‌ನ್ನು ಆಯಾ ಸಂಸ್ಥೆಗಳ ಕ್ರೀಡಾ ಚಟುವಟಿಕೆಗಳ ಉದ್ದೇಶಕ್ಕಾಗಿ ನೀಡಲಾಗಿರುತ್ತದೆ. ಸದರಿ ಸಂಸ್ಥೆಗಳಿಗೆ ಲೀಸ್ ಅವಧಿಯನ್ನು ವಿಸ್ತರಿಸಿರುವ ಹಾಗೂ ಬಾಡಿಗೆ ನಿಗಧಿಪಡಿಸುವ ಬಗೆಗಿನ ಮಾಹಿತಿ ಕೆಳಕಂಡಂತಿದೆ.

1. **ಬೆಂಗಳೂರು ಗಾಲ್ಫ್ ಕ್ಲಬ್ ಸಂಸ್ಥೆ:** ಬೆಂಗಳೂರಿನ ಸ್ಯಾಂಕಿ ರಸ್ತೆಯಲ್ಲಿರುವ ಗಾಲ್ಫ್ ಕ್ಲಬ್ 60 ಎಕರೆ 15 ಗುಂಟೆ ವಿಸ್ತೀರ್ಣವಿದ್ದು, ಸದರಿ ಜಾಗವನ್ನು ಸರ್ಕಾರದ ಆದೇಶ ಸಂಖ್ಯೆ: ದಿನಾಂಕ: 02.07.1971 ರ ಪ್ರಕಾರ ಬೆಂಗಳೂರು ನಗರದ ಗಾಲ್ಫ್ ಕ್ಲಬ್ ಸಂಸ್ಥೆಗೆ ವಾರ್ಷಿಕ ರೂ.100/- ರಂತೆ ಬಾಡಿಗೆ ವಿಧಿಸಿ 50 ವರ್ಷಗಳ ಅವಧಿಗೆ ಲೀಸ್ ನೀಡಲಾಗಿದ್ದು, ಸದರಿ ಲೀಸ್ ಅವಧಿಯು 2021ಕ್ಕೆ

ಮುಕ್ತಾಯಗೊಂಡಿರುತ್ತದೆ. ತದನಂತರದಲ್ಲಿ, ಸರ್ಕಾರದ ಆದೇಶ ದಿ:20.04.1987 ರಲ್ಲಿ ವಾರ್ಷಿಕವಾಗಿ 1985 ರಿಂದ 1991 ರವರೆಗೆ ರೂ.5,000/- ಹಾಗೂ 1992 ರಿಂದ 2021 ರವರೆಗೆ ರೂ.10,000/- ಗಳಿಗೆ ಬಾಡಿಗೆಯನ್ನು ಪರಿಷ್ಕರಿಸಲಾಗಿರುತ್ತದೆ. ಪ್ರಸ್ತುತ ಕ್ರೀಡಾ ಚಟುವಟಿಕೆಗಾಗಿ ಬೆಂಗಳೂರು ಗಾಲ್ಫ್ ಕ್ಲಬ್ ಸಂಸ್ಥೆಗೆ ನೀಡಲಾಗಿರುವ ಜಮೀನಿನ ಲೀಸ್ ಅವಧಿಯನ್ನು ಮುಂದುವರೆಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

2. **<u>ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆ:</u>**

- ಹಿಂದಿನ ಮೈಸೂರು ಮಹಾರಾಜರ ಸರ್ಕಾರವು ಕುದುರೆ ಓಡಿಸುವ ಸ್ಪರ್ಧೆಯನ್ನು ನಡೆಸುವ ಉದ್ದೇಶಕ್ಕಾಗಿ ದಿನಾಂಕ: 09.09.1923ರಂದು ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯವರಿಗೆ ಅಂದಿನ ಮಲ್ಲೇನಹಳ್ಳಿ ಗ್ರಾಮದ ಸರ್ವೆ ನಂ: 40,45,46,47 ಇಂದಿನ ಮುನಿಸಿಪಲ್ ಸರ್ವೆ ನಂ 52,52ಎ, 51ಬಿ ರಲ್ಲಿರುವ ಒಟ್ಟು 83 ಎಕರೆ 14 ಗುಂಟೆ ಜಮೀನನ್ನು ವಾರ್ಷಿಕ ಬಾಡಿಗೆ ಮೊತ್ತ ರೂ. 50,000.00 ಗಳಂತೆ ಲೀಸ್ ಆಧಾರದ ಮೇಲೆ ನೀಡಲಾಗಿರುತ್ತದೆ.
- ತದನಂತರದಲ್ಲಿ ದಿನಾಂಕ 01.01.1981 ರಿಂದ 30 ವರ್ಷಗಳ ಅವಧಿಗೆ ವಾರ್ಷಿಕ ರೂ.5.00 ಲಕ್ಷಗಳ ಪರಿಷ್ಕೃತ ಗುತ್ತಿಗೆ ಮೊತ್ತಕ್ಕೆ ಬೆಂಗಳೂರು ಟರ್ಫ ಕ್ಲಬ್‌ನೊಂದಿಗೆ ದಿನಾಂಕ:21.12.1983 ರಲ್ಲಿ ಲೀಸ್ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.
- ಬೆಂಗಳೂರು ಟರ್ಫ ಕ್ಲಬ್‌ಗೆ ನೀಡಲಾದ ಗುತ್ತಿಗೆ ಅವಧಿಯು ದಿನಾಂಕ 31.12.2009ರಂದು ಕೊನೆಗೊಳ್ಳುತ್ತಿದ್ದರಿಂದ, ಸದರಿ ದಿನಾಂಕದಿಂದಲೇ ಜಾರಿಗೆ ಬರುವಂತೆ ಗುತ್ತಿಗೆ ಅವಧಿಯನ್ನು ರದ್ದುಗೊಳಿಸಿ ಹಾಗೂ ಗುತ್ತಿಗೆಗೆ ನೀಡಲಾದ ಪೂರ್ಣ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲು ಸರ್ಕಾರದ ಆದೇಶ ದಿನಾಂಕ: 25.09.2008ರಲ್ಲಿ ಆದೇಶಿಸಲಾಗಿರುತ್ತದೆ. ಆದರೆ, ಟರ್ಫ್ ಕ್ಲಬ್ ಸಂಸ್ಥೆಯವರು ಜಮೀನನ್ನು ಹಸ್ತಾಂತರಿಸದೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟೀಷನ್ ಸಂಖ್ಯೆ: 30663/2009 ರಲ್ಲಿ ದಾವೆ ಹೂಡಿದ್ದರು. ಈ ಸಂಬಂಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:22.03.2010ರ ಆದೇಶದಲ್ಲಿ ದಿನಾಂಕ 22.09.2010ರ ಒಳಗೆ ರೇಸ್‌ಕೋರ್ಸ್ ಆವರಣವನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ನೀಡುವಂತೆ ನಿರ್ದೇಶನ ನೀಡಿರುತ್ತದೆ.
- ಬೆಂಗಳೂರು ಟರ್ಫ್ ಕ್ಲಬ್ ರವರು, ಮಾನ್ಯ ಉಚ್ಚ ನಾಯಾಲಯದ ಸದರಿ ದಿನಾಂಕ:22.03.2010ರ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ಸಂಖ್ಯೆ: 21157:2010 ರನ್ನು ದಾಖಲಿಸಿದ್ದು, ಸದರಿ ಪ್ರಕರಣ ವಿಚಾರಣೆ ನಡೆಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 07.09.2010ರ ಮಧ್ಯಂತರ ಆದೇಶದಲ್ಲಿ "ಯಥಾಸ್ಥಿತಿ ಕಾಪಾಡಲು" ಸೂಚಿಸಿದ್ದು, ಸದರಿ ಪ್ರಕರಣವು ಮಾನ್ಯ ಸರ್ವೋಚ್ಚ

ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಜಮೀನಿನಲ್ಲಿ ಟರ್ಫ್ ಕ್ಲಬ್ ಸಂಸ್ಥೆಯು ಮುಂದುವರೆದಿರುತ್ತದೆ.

- ನ್ಯಾಯಾಲಯ ಪ್ರಕರಣವು ವಿಳಂಬವಾಗುತ್ತಿರುವುದರಿಂದ, ಲೀಸ್ ಅವಧಿ ಮುಕ್ತಾಯಗೊಂಡ ದಿನಾಂಕದಿಂದ ಹಾಲಿ ಹಂತದವರೆಗೆ ಪರಿಷ್ಕೃತ ಬಾಡಿಗೆ ನಿಗಧಿಪಡಿಸಿ ಬಾಕಿ ಮೊತ್ತ ವಸೂಲಿ ಮಾಡುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಪ್ರಸ್ತುತ ಕ್ಲಬ್‌ಗಳಿಗೆ ಆಯಾ ಸಂಸ್ಥೆಗಳ ವಾರ್ಷಿಕ ವರಮಾನದ ಮೇಲೆ ಶೇ.2 ರಷ್ಟನ್ನು ಬಾಡಿಗೆಯನ್ನಾಗಿ ನಿಗಧಿಪಡಿಸಲು ಪ್ರಸ್ತಾಪಿಸಲಾಗುತ್ತಿದೆ. ಆದರೆ, ದಿನಾಂಕ::14.06.2022 ರಂದು ನಡೆದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಲೋಕೋಪಯೋಗಿ ಇಲಾಖೆ ಸಂಹಿತೆಯ ನಿಯಮಕ್ಕನುಗುಣವಾಗಿ ಜಮೀನಿನ ಮಾರುಕಟ್ಟೆ ದರಗಳನ್ನು ಪರಿಗಣಿಸಿ ಬಾಡಿಗೆಯನ್ನು ನಿಗಧಿಪಡಿಸುವಂತೆ ತಿಳಿಸಿದ್ದು, ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

3. **<u>ಮೈಸೂರು ಗಾಲ್ಫ್ ಕ್ಲಬ್ ಹಾಗೂ ಟರ್ಫ್ ಕ್ಲಬ್ ಸಂಸ್ಥೆ:</u>**

- ಮೈಸೂರು ಜಿಲ್ಲೆಯ ಕಸಬಾ ಹೋಬಳಿ, ಕುರುಬರಹಳ್ಳಿ ಗ್ರಾಮ ಸರ್ವೇ ನಂ.04 ಹಾಗೂ ನಂ.74 ರಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ 153 ಎಕರೆ 39 ಗುಂಟೆ ಜಮೀನು ಈ ಹಿಂದೆ ಮೈಸೂರು ಮಹಾರಾಜ ಇವರ ವಶದಲ್ಲಿದ್ದು, ಈ ಜಮೀನನ್ನು ಮೈಸೂರು ರೇಸ್ ಕ್ಲಬ್ ಲಿ., ಗೆ ರೇಸಿಂಗ್ ಚಟುವಟಿಕೆ ನಡೆಸಲು ಲೀಸ್ ಆಧಾರದ ಮೇಲೆ ನೀಡಲಾಗಿರುತ್ತದೆ. ತದ ನಂತರ ಈ ಜಮೀನನ್ನು ಮೈಸೂರು ರೇಸ್ ಕ್ಲಬ್ ಸಂಸ್ಥೆಯವರು ಅರಮನೆಯವರ ವತಿಯಿಂದ ಖರೀದಿಸಿರುತ್ತಾರೆ. ಜನವರಿ 1976ನೇ ಇಸವಿಯಲ್ಲಿ ಸದರಿ ಜಮೀನನ್ನು ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಿಂದ ರೂ.20.70 ಲಕ್ಷಗಳ ಪರಿಹಾರ ನೀಡಿ, ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ.
- ದಿನಾಂಕ: 30.10.1976ರ ಆದೇಶದಲ್ಲಿ ಸದರಿ ಜಮೀನನ್ನು ಮೈಸೂರು ರೇಸ್ ಕ್ಲಬ್ ಸಂಸ್ಥೆಗೆ 1976 ರಿಂದ 20 ವರ್ಷಗಳವರೆಗೆ ಪ್ರತಿ ಐದು ವರ್ಷಗಳಿಗೆ ಬಾಡಿಗೆ ಪರಿಷ್ಕರಿಸುವ ಷರತ್ತಿನೊಂದಿಗೆ ಮೊದಲ ಐದು ವರ್ಷಗಳಿಗೆ ವಾರ್ಷಿಕ ಬಾಡಿಗೆಯನ್ನು ರೂ. 80,000.00 ಗಳಂತೆ ನಿಗಧಿಪಡಿಸಲಾಗಿರುತ್ತದೆ. ತದನಂತರ, ದಿನಾಂಕ: 25.06.1982ರ ಆದೇಶದಲ್ಲಿ ಮೈಸೂರು ಟರ್ಫ್ ಕ್ಲಬ್ ಸಂಸ್ಥೆಯ ವಾರ್ಷಿಕ ಬಾಡಿಗೆಯನ್ನು ದಿನಾಂಕ: 05.02.1980 ರಿಂದ ಅನ್ವಯವಾಗುವಂತೆ ರೂ. 80,000.00 ರಿಂದ ರೂ. 1.20 ಲಕ್ಷಗಳಿಗೆ ಪರಿಷ್ಕರಿಸಲಾಗಿರುತ್ತದೆ. ತದನಂತರದಲ್ಲಿ ಸರ್ಕಾರದ ಆದೇಶಗಳನ್ವಯ ಲೀಸ್ ಅವಧಿಯನ್ನು ದಿನಾಂಕ:30.06.2016 ರವರೆಗೆ ಮುಂದುವರೆಸಲಾಗಿರುತ್ತದೆ. ಸದರಿ ರೇಸಿಂಗ್ ಚಟುವಟಿಕೆಯೊಂದಿಗೆ ಗಾಲ್ಫ್ ಚಟುವಟಿಕೆಗಳನ್ನು ನಡೆಸಲು ಸರ್ಕಾರದ ಪತ್ರ ದಿನಾಂಕ:12.04.2016 ರಲ್ಲಿ ಅನುಮತಿ ನೀಡಲಾಗಿರುತ್ತದೆ.

- ದಿನಾಂಕಃ 01.07.2016 ರಂದು ರೇಸಿಂಗ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ ಸ್ವತ್ತನ್ನು ಇಲಾಖೆಗೆ ಹಸ್ತಾಂತರಿಸಬೇಕಾಗಿತ್ತು. ಕರಾರಿನ ಅಂಶಗಳನ್ನು ಉಲ್ಲಂಘಿಸಿ ರೇಸಿಂಗ್ ಚಟುವಟಿಕೆಗಳನ್ನು ಮುಂದುವರೆಸಿದ್ದರಿಂದ ಇಲಾಖೆಯಿಂದ ಸ್ವತ್ತನ್ನು ತೆರವುಗೊಳಿಸಲು ದಿನಾಂಕಃ 11.11.2016 ರಂದು ನೋಟೀಸ್ ನೀಡಲಾಯಿತು. ಸದರಿ ನೋಟೀಸ್‌ಗೆ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 59784:2016 ರಲ್ಲಿ ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ರವರು ದಾವೆ ಹೂಡಿ ಇಲಾಖೆಯಿಂದ ನೀಡಿದ ನೋಟಿಸ್‌ಗೆ ದಿನಾಂಕಃ 23.11.2016 ರಂದು ತಡೆಯಾಜ್ಞೆ ತಂದಿರುತ್ತಾರೆ. ಗಾಲ್ಫ್ ಕ್ಲಬ್‌ನವರು ಕೂಡ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:26312/2016 ಅನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯವು ಸದರಿ ಅರ್ಜಿಯನ್ನು ನಿಯಮಾನುಸಾರ ಪರಿಗಣಿಸುವಂತೆ ತಿಳಿಸಿರುತ್ತದೆ.
- ಈ ಹಿನ್ನೆಲೆಯಲ್ಲಿ, ದಿನಾಂಕಃ 17.01.2020 ರ ಸರ್ಕಾರದ ಆದೇಶದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಜಮೀನು ಸರ್ವೇ ನಂ.4 ಮತ್ತು ಸರ್ವೇ ನಂ.74 ರಲ್ಲಿ ಒಟ್ಟು 139 ಎಕರೆ 39 ಗುಂಟೆ ಜಮೀನನ್ನು ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ರವರಿಗೆ ದಿನಾಂಕಃ 01.07.2016 ರಿಂದ ದಿನಾಂಕಃ 31.07.2046 ರವರೆಗೆ (30 ವರ್ಷಗಳ ಅವಧಿ) ಸದರಿ ಸಂಸ್ಥೆಗಳ ವಾರ್ಷಿಕ ವರಮಾನದ (Gross Annual Income) ಶೇ.2 ರಷ್ಟು ಮೊತ್ತದ ಬಾಡಿಗೆಯನ್ನು ನಿಗಧಿಪಡಿಸಿ ನೀಡಲು ಆದೇಶಿಸಲಾಗಿರುತ್ತದೆ.

**ಸಂಖ್ಯೆ: ಲೋಇ 52 ಬಿಎಲ್ ಕ್ಯೂ 2022**

**(ಸಿ.ಸಿ. ಪಾಟೀಲ)**
ಲೋಕೋಪಯೋಗಿ ಸಚಿವರು.

C 78